

ಕಿತ್ತಾಡಿದ್ದು, ಕೋಪಿಸಿಕೊಂಡು ಒಂದೆರಡೇಟು ಕೊಟ್ಟಿದ್ದು, ಅವಳು ಮುನಿಸಿಕೊಂಡು ಅತ್ತು ಕರೆದದ್ದು, ಕೆಲವೊಮ್ಮೆ ಸಿಟ್ಟಾಗಿ ಕೆಲವು ದಿನ ತವರುಮನೆಗೆ ಹೋದದ್ದು ಎಲ್ಲ ಆಗಿದೆ. ಬರುಬರುತ್ತ ಇದೆಲ್ಲ ಸರಿ ಅಲ್ಲ ಎನಿಸಿ ಬಿಟ್ಟಾಗಿದೆ. ಹಾಗಂತ ಈಗ ನಾವು ಜಗಳ ಆಡುವುದೇ ಇಲ್ಲ, ಕೋಪಿಸಿಕೊಳ್ಳುವುದಿಲ್ಲ ಅಂತಲ್ಲ. ಈಗಲೂ ನಾವಿಬ್ಬರು ಪರಸ್ಪರ ಕಚ್ಚಾಡುವುದು, ಕಿತ್ತಾಡುವುದು ಇದೆ. ಆದರೆ ಅದು ಕ್ಷಣಕಾಲ ಮಾತ್ರ. ಆಗಿನಂತೆ ಅವಳು ಈಗಿಲ್ಲ. ಅವಳು ಮಾಗಿದ್ದಾಳೆ. ನನಗಿಂತ ವಯಸ್ಸಿನಲ್ಲಿ ಒಂದೆರಡು ವರ್ಷ ಚಿಕ್ಕವಳಾದರೂ ಅವಳಾಡುವ ಮಾತುಗಳಲ್ಲಿ ಪ್ರಬುದ್ಧತೆ ಕಾಣುತ್ತದೆ. ಹೆಣ್ಣುಮಕ್ಕಳು ಮದುವೆಯಾದ ಮೇಲೆ ಮಾನಸಿಕವಾಗಿ ದೊಡ್ಡವರಾಗಿಬಿಡುತ್ತಾರೆ ಅನಿಸುತ್ತದೆ. ಅವಳ ಸಹನೆ, ತಾಳ್ಮೆ ಒಮ್ಮೊಮ್ಮೆ ನನಗೆ ಆಶ್ಚರ್ಯ ಮೂಡಿಸುತ್ತದೆ. ಅವಳು ಕೋಪಿಸಿಕೊಂಡರೆ ಮಾತ್ರ ನನ್ನ ಕೈಕಾಲು ನಡಗುತ್ತವೆ. ಬಾಯಿ ಒಣಗುತ್ತದೆ. ಮಾತು ಹೊರಡದೆ ತಡವರಿಸಲು ಶುರುವಾದ ಕೂಡಲೇ ಮೆಲ್ಲಗೆ ಅಲ್ಲಿಂದ ಕಾಲು ಕೀಳುತ್ತೇನೆ. ಮರಳಿ ಮನೆಗೆ ಬರುವುದರೊಳಗೆ ಅವಳು ಕಾದು ತಣ್ಣಗಾದ ಹಂಚಿನಂತಾಗಿರುತ್ತಾಳೆ. ಪಾತ್ರೆ, ಪಗಡೆ ಸದ್ದು ಮಾಡುತ್ತವೆ. ಮಕ್ಕಳ ಮೇಲೆ ಹುಸಿಕೋಪ ತೋರುತ್ತ ಅವರನ್ನು ಬೈಯುವ ನೆಪದಲ್ಲಿ ನನ್ನನ್ನೇ ಬೈಯುತ್ತ, ತಣ್ಣಗಾಗುತ್ತಾಳೆ. ಹಾಸಿಗೆಗೆ ಒರಗುವ ಹೊತ್ತಿಗೆ ಕೋಪ ಕರಗಿದರೂ ಸಿಡುಕು ಜೀವಂತವಾಗಿರುತ್ತೆ. ರಮಿಸಿದರೂ ಬಗ್ಗದೆ ಮೈ ಹೊರಳಿಸಿ ಮುಸಿಮುಸಿ ಅಳುವ ಶಬುದ ಕೇಳುತ್ತೆ. ತಾಸೊತ್ತಾದ ಮೇಲೆ ಎಲ್ಲ ಮಾಯವಾಗಿ ಮನ, ಮನೆಯಲ್ಲಿ ತಂಗಾಳಿ ಸೂಸುತ್ತೆ'. ವಿಶಾಲನ ಈ ವಿನೋದದ ಮಾತುಗಳನ್ನು ಕೇಳಿ ವಿನೋದಗೆ ನಗು ಬಂತು.

'ನಿಜಕ್ಕೂ ನೀನೇ ಪುಣ್ಯವಂತ ಕಣಯ್ಯ. ವೈಶಾಲಿ ಬಾಯಿ ಜೋರಾಗಿದ್ದರೂ ಒಳ್ಳೆಯ ಹೆಣ್ಣು. ಅವಳು ಹೇಗಿದ್ದಾಳೆ, ಅವಳ ಗುಣ ಎಂತಹದು ಅಂತ ಅವಳನ್ನು ನೋಡಿದ ಯಾರಿಗಾದರೂ ಗೊತ್ತಾಗುತ್ತೆ. ಅವಳ ಗುಣ, ನಡತೆ ಎಂಥವರಲ್ಲೂ ಗೌರವ ಮೂಡಿಸುತ್ತೆ. ನೀನು ನೋಡಿಲ್ಲ ಮಹಾರಾಯ, ಒಂದೊಂದು ಮನೆಗಳಲ್ಲಿ ಗಂಡ–ಹೆಂಡತಿ ಸಣ್ಣಪುಟ್ಟ ವಿಷಯಕ್ಕೆಲ್ಲ ಕಚ್ಚಾಡುವುದು, ಕುಡಿದು ಬಂದು ಕಿರಿಕಿರಿ ಮಾಡುವ ಗಂಡನಿಗೆ ಹೆಂಡತಿ ಪೊರಕೆ ಸೇವೆ ಮಾಡುವುದನ್ನು ನೋಡಿದರೆ ರೇಜಿಗೆಯಾಗುತ್ತೆ. ಯಾವ ಕರ್ಮಕ್ಕಾಗಿ ಈ ಮದುವೆ ಮುಂಜಿಯಲ್ಲ ಅನಿಸಿ, ಮದುವೆ ಆಗುವುದೇ ಬೇಡಪ್ಪ ಅನಿಸುತ್ತೆ. ಹೆಂಡತಿಯ ಮೇಲೆ ದರ್ಬಾರ್ ಮಾಡುವ ಗಂಡ, ಗಂಡನ ಕಂಡರೆ ಗಡಗಡ ನಡುಗುವ ಹೆಂಡತಿಯರನ್ನೂ ನೋಡಿದ್ದೇನೆ. ಸಂಸಾರದಲ್ಲಿ ಕಷ್ಟ–ಸುಖ ಎರಡೂ ಇದೆ. ಎಲ್ಲಕ್ಕಿಂತ ಇಬ್ಬರ ನಡುವೆ ಹೊಂದಾಣಿಕೆ ಮುಖ್ಯ. ಸಣ್ಣಪುಟ್ಟ ವಿಷಯಕ್ಕೆ ಕೂಗಾಡುವುದು, ಕಿರುಚಾಡುವುದು ಸರಿಯಲ್ಲ ಅನಿಸುತ್ತೆ. ಈ ವಿವಾಹ ವಿಚ್ಛೇದನಗಳಿಗೆ ಇಬ್ಬರ ನಡುವೆ ಹೊಂದಾಣಿಕೆ ಇಲ್ಲದಿರುವುದು ಮತ್ತು ಒಬ್ಬರು ಮತ್ತೊಬ್ಬರನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದೇ ಕಾರಣ ಅನಿಸುತ್ತೆ. ಮದುವೆ ಬಂಧನವಲ್ಲ, ಬಿಡುಗಡೆಯೂ ಅಲ್ಲ, ಮದುವೆ ಅಂದರೆ ಹೊಂದಾಣಿಕೆ ಅಷ್ಟೇ' ಎಂದ ವಿನೋದ.

'ಅದೇನೋ ನನಗೆ ಗೊತ್ತಿಲ್ಲ ಮಾರಾಯ. ನಿನ್ನಷ್ಟು ನಾನು ಓದಿದವನಲ್ಲ, ತಿಳಿದವನೂ ಅಲ್ಲ, ಒಂದಂತೂ ಸತ್ಯ, ಸಂಗಾತಿಯನ್ನು ನಾವು ಪ್ರೀತಿಸಿದರೆ, ಗೌರವಿಸಿದರೆ ಅವಳೂ ನಮ್ಮನ್ನು ಪ್ರೀತಿಸುತ್ತಾಳೆ, ಗೌರವಿಸುತ್ತಾಳೆ ಅಂತ ತಡವಾಗಿಯಾದರೂ ನಾನು ಅರಿತುಕೊಂಡೆ ಅನಿಸುತ್ತೆ. ಇದು ಬಿಟ್ಟರೆ ಸುಖಿ ಸಂಸಾರ, ಆದರ್ಶ ದಾಂಪತ್ಯ ಅನ್ನುವುದರಲೆಲ್ಲ ನನಗೆ ನಂಬಿಕೆ ಇಲ್ಲ' ಎಂದ.

'ನೀನು ಹೇಳೋದು ನಿಜ. ಟೀವಿ ಶೋಗಳಲ್ಲಿ ಅದೇನು ಪೋಸ್ ನೀಡುತ್ತಾರೋ ಮಹಾರಾಯ, ಅದೇನೋ ಆದರ್ಶ ದಂಪತಿ ಅಂತೆ, ಮಾದರಿ ಜೋಡಿಯಂತೆ, ಮೇಡ್ ಫಾರ್ ಈಚ್ ಅದರ್ ಅಂತೆ... ಈ ಅಂತೆ ಕಂತೆಗಳೆಲ್ಲ ಬರಿ ಪೊಳ್ಳು. ಗಂಡ ಹೆಂಡತಿ, ಸಂಸಾರ ಅಂದಮೇಲೆ ನೂರು ಬರುತ್ತೆ, ನೂರು ಹೋಗುತ್ತೆ. ಯಾರು ಏಕೆ ಕೋಪ ಮಾಡಿಕೊಳ್ಳುತ್ತಾರೆ, ಯಾವ ಕಾರಣಕ್ಕೆ ಸಿಟ್ಟಾಗುತ್ತಾರೆ ಅಂತ ಹೇಳಲಿಕ್ಕೆ ಆಗುತ್ತಾ? ಯಾವುದೋ ವಿಷಯಕ್ಕೆ, ಯಾವುದೋ ಮಾತಿಗೆ, ಯಾರದೋ ಕಾರಣಕ್ಕೆ ಜಗಳ ಬರುತ್ತೆ. ಇಬ್ಬರಲ್ಲಿ ಒಬ್ಬರು ಸಮಾಧಾನಿಯಾದರೆ, ತಾಳ್ಮೆ ವಹಿಸಿದರೆ, ಬಾಯಿ ಮುಚ್ಚಿಕೊಂಡರೆ, ಎಲ್ಲವೂ ತಾನೇ ತಾನಾಗಿ ಬಗೆಹರಿಯುತ್ತೆ. ಅದು ಬಿಟ್ಟು ನಾನೋ ನೀನೋ ಎಂದು ಒಬ್ಬರ ಮೇಲೆ ಒಬ್ಬರು ದೂಷಣೆ ಮಾಡುತ್ತ, ಆರೋಪ ಪ್ರತ್ಯಾರೋಪ ಹೊರಿಸುತ್ತ, ಸರಿ–ತಪ್ಪು ಹುಡುಕುತ್ತಾ ಹೋದರೆ ಜಗಳ ತಾರಕಕ್ಕೇರದೆ ಮತ್ತಿನ್ನೇನಾಗುತ್ತೆ? ಸೋಲಬೇಕು ಕಣಯ್ಯ, ಗಂಡಾಗಲಿ, ಹೆಣ್ಣಾಗಲಿ ಕೆಲವೊಮ್ಮೆ ಸೋಲಬೇಕು. ಸೋತು ಗೆದ್ದವನೇ ಧೀರ ಅನ್ನುವ ಮಾತು ಕೇಳಿಲ್ಲವೆ. ಸೋತಾಗಲೇ ಸುಖ ಸಿಗೋದು, ಇದು ಬಹಳ ಜನರಿಗೆ ಅರ್ಥವೇ ಆಗಲ್ಲ. ಇರಲಿ ಬಿಡು, ನೀವು ಸುಖವಾಗಿದ್ದೀರಲ್ಲ ಅಷ್ಟು ಸಾಕು, ಹೊತ್ತಾಯ್ತು ಮಾರಾಯ. ಮನೆಯಲ್ಲಿ ಅವ್ವ ದಾರಿ ಕಾಯ್ತಾಳೆ. ನಾನಿನ್ನು ಬರ್ತೀನಿ' ಎಂದು ವಿನೋದ ಮನೆ ಕಡೆ ಹೆಜ್ಜೆ ಹಾಕಿದ.

ವಿನೋದ ಹೋದ ಮೇಲೆ ವಿಶಾಲ ತನ್ನನ್ನೇ ತಾನು ಕೇಳಿಕೊಂಡ. ಜನ ಹೇಳುವ ಹಾಗೆ ನಮ್ಮದು ನಿಜವಾಗಿಯೂ ಸುಖಿ ದಾಂಪತ್ಯವೆ? ನಾವು ಆದರ್ಶ ದಂಪತಿಯೆ? ನಾನು ನಿಜವಾಗಿಯೂ ಹೆಂಡತಿಗೆ ಹೆದರುತ್ತೇನೆಯೇ? ಎಂದೆಲ್ಲಾ ಯೋಚಿಸತೊಡಗಿದ. ಅವನು ಅದೆಷ್ಟೇ ಅಲ್ಲಗಳೆದರೂ, 'ಹೌದು ನೀನು ಹೆಂಡತಿಗೆ ಹೆದರುತ್ತೀಯ, ಆ ಕಾರಣಕ್ಕೆ ಅವಳ ಜೊತೆಗೆ ಜಗಳವಾಡಲು ಹಿಂಜರಿಯುತ್ತೀಯ, ಜಗಳ ತಾರಕ್ಕೇರುವ ಮುಂಚೆಯೇ ಅಲ್ಲಿಂದ ಪರಾರಿಯಾಗಲು ಯತ್ನಿಸುತ್ತೀಯ' ಎಂದು ಅವನ ಅಂತರಾತ್ಮ ಚೀರಿತು. ಏಕೆ? ಏಕೆ? ಏಕೆ? ಎಂದು ತನ್ನನ್ನೇ ತಾನು ಕೇಳಿಕೊಂಡ. ಅವನ ಬಾಲ್ಯದಲ್ಲಿ ಕಂಡ ಆ ಭಯಾನಕ ದೃಶ್ಯ ಅವನ ಕಣ್ಮುಂದೆ ಹಾದುಹೋಯಿತು.

***

ವಿಶಾಲ ಇನ್ನೂ ಚಿಕ್ಕವನಿದ್ದ. ಪಕ್ಕದ ಮನೆಯ ಸರೋಜಕ್ಕ–ರಾಮಣ್ಣ ನಿತ್ಯ ಕಚ್ಚಾಡುತ್ತಿದ್ದರು. ರಾಮಣ್ಣ ಮೇಲ್ನೋಟಕ್ಕೆ ಸಂಭಾವಿತನಂತೆ ಕಂಡರೂ ಒಳಗೆ ಉಗ್ರರೂಪಿಯಾಗಿದ್ದ. ರಾಮಣ್ಣ ರಾತ್ರಿ ಕುಡಿದು ಮನೆಗೆ ಬಂದರೆ ಸರೋಜಕ್ಕ ಗಡಗಡ ನಡುಗುತ್ತಿದ್ದಳು.

ಸರೋಜಕ್ಕ ನೋಡಲು ಚೆನ್ನಾಗಿದ್ದಳು. ಮೈಕೈ ತುಂಬಿಕೊಂಡು ಮುದ್ದಾಗಿ ಕಾಣುತ್ತಿದ್ದಳು. ಅವಳ ಸೌಂದರ್ಯವೇ ಅವಳಿಗೆ ಮುಳುವಾಗಿತ್ತು. ರಾಮಣ್ಣನ ತಲೆಯಲ್ಲಿ ಸಂಶಯದ ಹುಳು ಹೊಕ್ಕಿತ್ತು. ಅವಳು ಕುಂತರೂ ನಿಂತರೂ ನಕ್ಕರೂ, ಪರಿಚಿತರೊಂದಿಗೆ ಮಾತಾಡಿದರೂ ಅವನು ಸಹಿಸಿಕೊಳ್ಳುತ್ತಿರಲಿಲ್ಲ. ಅವನು ಮನೆಗೆ ಬಂದಾಗ ಅವಳು ಮನೆಯೊಳಗೇ ಇರಬೇಕು, ಅವಳು ಹೊರಗೆಲ್ಲಿಗಾದರು ಹೋಗಿದ್ದರೆ ಅವತ್ತು ಮನೆಯಲ್ಲಿ ಲಡಾಯಿಯೇ ನಡೆದುಹೋಗುತ್ತಿತ್ತು.

ಅವತ್ತು ರಾತ್ರಿ ಅದೇನಾಯಿತೋ ಏನೋ, ಕುಡಿದು